ಕನ್ನಡ ವಿಮರ್ಶೆಗೆ ಹೊಸ ಮಾತುಗಳನ್ನು ಸೇರಿಸುತ್ತಿರುವ ರವಿಕುಮಾರ್ ನೀಹ ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನ ನೀಲಗೊಂಡನಹಳ್ಳಿಯವರು. ಕನ್ನಡ ಪ್ರಾಧ್ಯಾಪಕರು. ಸಂಶೋಧನೆ, ವಿಮರ್ಶೆ ಹಾಗೂ ಕಾವ್ಯ ಪ್ರಕಾರಗಳಲ್ಲಿ ತೊಡಗಿಸಿಕೊಂಡಿರುವ ರವಿಕುಮಾರ್ ಉತ್ತಮ ಕಥೆಗಾರರೂ ಹೌದು. 'ನೆರಳಿಲ್ಲದ ಕಾಯಿ', 'ಪುಸ್ತಕ ವಿಮರ್ಶೆ: ಸಾಂಸ್ಕೃತಿಕ ಬಿಕ್ಕಟ್ಟುಗಳ ಹುಡುಕಾಟ', 'ನೆಲನಿಲ್ಲದ ಭೂಮಿ' ಹಾಗೂ 'ಕಂಡದಾರಿ' ಸಹೃದಯರ ಗಮನಸೆಳೆದಿರುವ ವಿಮರ್ಶೆ–ಚಿಂತನೆಯ ಕೃತಿಗಳು. ಕೆ.ಬಿ. ಸಿದ್ಧಯ್ಯನವರ ಕಾವ್ಯವನ್ನು ಚರ್ಚಿಸುವ 'ಕಣ್ಣು ಧರಿಸಿ ನೋಡಿರೊ', 'ಅರಸು ಕುರನ್ಗರಾಯ' ಸಂಶೋಧನಾ ಕೃತಿ ಹಾಗೂ 'ಜಲಜಂಬೂಕನ್ಯೆ' ಖಂಡಕಾವ್ಯ – ರವಿಕುಮಾರ್ ಅವರ ಮುಖ್ಯ ಕೃತಿಗಳು.

ಹಚ್ಕಂಡು 'ಬರ್ರೋ, ನೀವು ಅಪ್ಪಂಗೆ ಹುಟ್ಟಿದ್ರೆ ನಮ್ಮುಮೀನ ಮುಟ್ರಿ. ಇವತ್ತೇ ನಿಮ್ಗೆ ಹುಟ್ಟಿದ ದಿನ ಕಾಣಿಸಿಬಿಟ್ತಿವಿ' ಎಂದು ಗುಡ್ಲು ಸುತ್ತ ಓಡಾಡುತ್ತಿದ್ರಂತೆ. ಇದ್ರಿಂದ ಹೆದ್ರಿದ ಮಾರಯ್ಯನ ಅಪ್ಪ ಗುಡ್ಲಿಂದ ಆಚ್ಗೆ ಬರ್ಲಿಲ್ಲವಂತೆ. 'ಯಾವ ಜಮೀನು ಬೇಡ, ಬದ್ಕಿರೇ ಸಾಕು' ಅಂತ ಅಂಗೈನಾಗೆ ಜೀವ ಹಿಡ್ಕಂಡು ರಾತ್ರಿಯೆಲ್ಲ ಕತೆ ಹಾಕ್ತಿದ್ರಂತೆ. ದಿನರಾತ್ರಿ ಇಂಗೆ ನಡಿತಿತ್ತಂತೆ. ಅದ್ಯಾಕಾದ್ರೂ ಸರ್ಕಾರ ಇಂಥೊದ್ದನ್ನು ತಂತಪ್ಪ ಅಂತ, ಟೆನನ್ಸಿ ಅಂದ್ರೇ ನಡುಗ್ತಿದ್ರಂತೆ ಅಂತ ಮಾರಯ್ಯ ತನ್ನಪ್ಪನ್ನ ಬಗೆಗೆ ಕದ್ರನಿಗೆ ಹೇಳಿದ್ದು ನೆನಪಿಗೆ ಬಂತು. ಜಮೀನು ಇಲ್ಲ. ವಂಶಪಾರಂಪರ್ಯವಾಗಿ ಕುಲ್ವಾಡಿಕೆ ಅಂಟ್ಕಂಡು ಬಂದಿತ್ತು. ಕದ್ರನಿಗೆ ಒಂದು ಕಡೆ ಜಾತಿಯ ಹೆಸರು, ಕುಲ್ವಾಡ್ಕೆ, ಮತ್ತೊಂದು ತನಗಿಟ್ಟಿರುವ ಹೆಸರು, ಎರಡೂ ಇನ್ನಿಲ್ಲದಂತೆ ತೊಂದರೆ ಕೊಡಲಾರಂಭಿಸಿದವು. ಅದಾದ ಮರುವರ್ಷಕ್ಕೆ ಮುಷ್ಣಿ ಟಿಸಿ ತಗೊಂಡೋಗಿ ಯಾವ್ದೊ ಮಠುದ್ ಸ್ಕೂಲ್ಗೆ ಸೇರ್ದ ಅಂತ ಲೋಕೇಶ ಹೇಳ್ದ. ಎಷ್ಟು ಓದಿದರೂ ಕದ್ರನಿಗೆ ತನ್ನ ಹೆಸರು ಜಾತಿಯ ಕೀಳರಿಮೆಯನ್ನು ಅಂಟಿಸಿಬಿಟ್ಟಿತ್ತು. ಇದರಿಂದ ರೋಸಿ ಊರಿಗೋದಾಗ ತನ್ನಪ್ಪ ಅವ್ವರನ್ನು ಕೇಳಿದ್ದ. 'ನನ್ ಫ್ರೆಂಡ್ಸೆಲ್ಲಾ ಎಂತೆಂಥ ಹೆಸರಿಟ್ಟುಕೊಂಡ್ವಾರೆ. ಕೊನೆಪಕ್ಷ ಲೋಕೇಶ, ರಮೇಶ, ಸುರೇಶ ಇಂತವು ಕಾಣ್ಲಿಲ್ವಾ?' ಎಂದ. ಅವರಪ್ಪ ಮಾರಯ್ಯ 'ಅಯ್ಯೋ ನಮ್ಗೇನು ಗೊತ್ತಾಗುತ್ತಪ್ಪ. ಅಯ್ನೋರ್ನ ಕೇಳಿವಿ. ಅವ್ರೇ ಈ ಹೆಸ್ರು ಇಡಕ್ಕೆ ಯೋಳಿರು. ಚೆನ್ನಾಗೈತೆ ಹೆಸರು. ಯಾಕೇ ಏನಾತು?' ಎಂದು ಮುಗ್ಧವಾಗಿ ಕೇಳಿದರು. ಉತ್ತರಿಸಲು ಕದ್ರನಲ್ಲಿ ಪದಗಳಿರಲಿಲ್ಲ. ಅವಮಾನಕ್ಕೆ ಪದಗಳು ನಾಚುತ್ತಿದ್ದವು.

ಅಂಗೂ ಇಂಗೂ ಎಸೋಲ್ಸಿ ಮುಗ್ಸಿ ಕಾಲೇಜು ಮೆಟ್ಲು ಹತ್ತಿದ. ಈಗ ಅವ್ನಿಗೆ ಹೆಸ್ರು ಹೆಚ್ಚು ತೊಂದ್ರೆ ಕೊಡೋಕೆ ಶುರುವಾಯ್ತು. ಎಲ್ರೂ ಕದ್ರ ಅನ್ನೋ ಹೆಸರಲ್ಲೇ ಜಾತಿನ ಗುರುತಿಸೋ ಅಂಗಾಗಿತ್ತು. ಮೊದಲು ನನ್ನ ಜಾತಿಯ ಯಾವ ಕುರುಹು ಇಲ್ದಂಗೆ ಮಾಡ್ಕಬೇಕು ಅಂತ ಪಾಠ ಕೇಳುವಾಗಲೆಲ್ಲಾ, ಓದ್ವಾಗಲೆಲ್ಲಾ, ಆಟವಾಡುವಾಗ, ಯಾರಾದ್ರೂ ಜೊತೆ ಮಾತನಾಡುವಾಗ ಇದನ್ನೇ ಯೋಚಿಸ್ತಿದ್ದ. ಯಾರಾದ್ರೂ ಹೊಸುಬ್ರು ಅವ್ನ ಹೆಸ್ರು ಕೇಳಿರಂಥೂ ಭೂಮಿಯೋಳ್ಗೆ ಉದ್ದೋಗಿರೋನು? ಏನೇನೋ ಹೇಳಿ ತಪ್ಪುಸ್ಕಳ್ತಿದ್ದ. ಎಷ್ಟು ದಿನ ಅಂತ ಹೆಸರು ಹೇಳ್ದೆ ಇರೋದು. ಅದುಕ್ಕೆ ಹೆಸ್ರು ಚೆಂಜ್ ಮಾಡ್ಬೇಕು ಅಂದ್ಕಂಡು ತನ್ನ ಕಾಲೇಜಿನ ಸೀನಿಯರ್‌ನ ಕೇಳಿದ. ಅವ್ನು ಇಂಥವುಗಳಿಂದ ಬೇಸತ್ತು ಹೆಸ್ರುನೂ ಕುಲನೂ ಬದಲಿಸಿಕೊಂಡಿದ್ದ. ಅವನು 'ಅದ್ಕೆ ಸ್ಯಾನೇ ಕರ್ಚಾಗ್ತದೆ. ಕರ್ಚಾಗ್ದೆ ಹೆಸ್ರು ಚೆಂಜ್ ಮಾಡ್ಕಬೇಕು ಅಂದ್ರೇ ಕ್ರಿಶ್ಚಿಯನ್ ಆಗು. ತುಂಬಾ ಸುಲಭದ್ದು' ಅಂದಾಗ ಕದ್ರನಿಗೆ ನಿರಾಸೆಯಾಯಿತು. ಆದ್ರೂ ಯೇನಾದ್ರೂ ಮಾಡಿ, ದುಡ್ಡು ಹೆಸ್ರು ಚೆಂಜ್ ಮಾಡ್ಕಳ್ಳೇಬೇಕು ಎಂದು ನಿರ್ಧರಿಸಿದ್ದ.

ಬಿಟ್ಟುಪುರ ಟೌನ್‌ನಲ್ಲಿ ಪ್ರತಿವರ್ಷನೂ ಮದ್ವೆ ಸೀಸನ್ ಬಂತು ಅಂದ್ರೇ ಹಾಸ್ಟೆಲ್ ಹುಡುಗ್ರೆಲ್ಲಾ ಬ್ಯುಸಿಯಾಗ್ಬಿಡ್ತಿದ್ರು. ಅಡ್ಗೆ ಕಂಟ್ರಾಕ್ಟ್‌ದಾರ ಕಡ್ಮೆ ಸಂಬ್ಳಕ್ಕೆ ಸಿಗ್ತಾರೆ ಅಂತ ಈ ಹಾಸ್ಟೆಲ್‌ಗೆ ಬಂದು ಒಂದಷ್ಟು ಹುಡುಗ್ರುನ್ನ ಕರ್ಕಂಡು ಹೋಗ್ತಿದ್ದ. ಅಡ್ಗೆಗೆ ಸಪ್ಲೈ ಮಾಡಕ್ಕೆ ಅಂತ. ಚಂದ್ರುಶೆಟ್ಟಿ ಗ್ರಂದ್ಗೆ ಅಂಗಡಿಯಲ್ಲಿ ಮಾತ್ರ ಸಿಕ್ತಿದ್ದ ಕೆಂಪ್ಟವೆಲ್ ತಂಗೊಂಡು